ಇಂಗ್ಲಿಷ್ ಮೂಲ: ಉಷಾ ರಾಜಗೋಪಾಲನ್
**ಕನ್ನಡಕ್ಕೆ: ಸಹನಾ ಹೆಗಡೆ**

ಶೀಲಾ ಮತ್ತು ರಾಣಿ ಯಾವಾಗಲೂ ನಡೆಯುವುದೇ ಒಟ್ಟಾಗಿ, ಒಬ್ಬರ ಕೈಯಲ್ಲಿ ಮತ್ತೊಬ್ಬರು ಕೈ ಹಾಕಿಕೊಂಡು. ನಡೆದಾಡುವ ಪ್ರತಿಯೊಬ್ಬರೂ ಅವರಿಗೆ ಜಾಗ ಬಿಟ್ಟುಕೊಡಲೇಬೇಕಾಗಿ ಬರುತ್ತಿತ್ತು. ಸುಮಾರು ಎಂಟು ಒಂಬತ್ತು ವಯಸ್ಸಿನ ಅವರದು ಬಡಕಲು ಶರೀರ, ಕಪ್ಪಗಿನ ಮೈಬಣ್ಣ. ಉದ್ದಕ್ಕೆ ತೆಳುವಾಗಿದ್ದ ಕೂದಲು ಬಿಸಿಲು, ಅಪೌಷ್ಟಿಕತೆಗಳಿಂದಾಗಿ ಕಂದುಗಂಟಿಗೆ ತಿರುಗಿತ್ತು. ಸೊಂಟದ ಎಡಭಾಗದ ಮೇಲೆ ತನ್ನ ತಮ್ಮನನ್ನು ಹೊತ್ತಿರುತ್ತಿದ್ದ ಕಾರಣ, ರಾಣಿ ನಡೆಯುವುದು ಸೊಟ್ಟಸೊಟ್ಟದಾಗಿ. ಭಿಕ್ಷೆ ಬೇಡುವ ಸಮಯಕ್ಕೆ ಆತ ಅವಳಿಗೆ ತುಂಬಾ ಉಪಯೋಗಕ್ಕೆ ಬರುತ್ತಿದ್ದ. ಶೀಲಾ ತನ್ನ ಕೊಳಕಾದ ಪುಟ್ಟ ಅಂಗೈಗಳನ್ನು ಸೇರಿಸಿ ಬಟ್ಟಲು ಮಾಡಬಲ್ಲಳು, ಆಮೂಲಕ ಕರುಣಾಜನಕವಾಗಿ ಕಾಣಿಸಬಲ್ಲಳು ಅಷ್ಟೆ. ಅವರ ಗೋಗರೆತ, ಪೀಡನೆ, ಸುಳ್ಳುಕಂತೆಗಳೆಲ್ಲ ಅತ್ಯಂತ ಹೆಚ್ಚು ಪರಿಣಾಮಕಾರಿಯಾಗಿರುತ್ತಿದ್ದುದು ಶುಕ್ರವಾರದ ಸಾಯಂಕಾಲದ ಹೊತ್ತು, ವಾರದ ಕೊನೆ ಆರಂಭವಾಗುವ ವೇಳೆ. ಉಳಿದ ದಿನಗಳಲ್ಲಿ ಶೀಲಾ ಹೆಚ್ಚಾಗಿ, ಜೇಬು ಕತ್ತರಿಸಲು, ಅಂಗಡಿಗಳಿಂದ ಸಾಮಾನುಗಳನ್ನು ಕದಿಯಲು ಅಥವಾ ಎಲ್ಲೋ ಒಮ್ಮೊಮ್ಮೆ ನೆರೆಹೊರೆಯ ಜನರಿಗೆ ಅವರ ಅಪರಾಧಗಳಲ್ಲಿ ನೆರವಾಗಲು ಇಷ್ಟಪಡುತ್ತಿದ್ದಳು. ಅವಳಿಗೆ ಅತ್ಯಂತ ಪ್ರಿಯವಾದುದೆಂದರೆ ಅಪರಿಚಿತರ ಕಿಸೆಯಲ್ಲಿ ಚಾಣಾಕ್ಷ್ಯತನದಿಂದ ಕೈಯಿಕ್ಕುವ ಕೆಲಸ. ಅದರಲ್ಲಿದ್ದ ಅಪಾಯ ಹಾಗೂ ಅನಿಶ್ಚಿತತೆಗಳಿಂದಾಗಿ ಅವಳಿಗೆ ಹಸಿವೂ ಮರೆತುಹೋಗುತ್ತಿತ್ತು.

'ಆದರೆ ನನಗಂತೂ ತಮ್ಮನನ್ನು ಎತ್ತಿಕೊಂಡು ಓಡಲಾಗುವುದಿಲ್ಲಪ್ಪ! ಎದೆ ಢವ, ಢವ ಹೊಡೆದುಕೊಳ್ಳುತ್ತದೆ. ಕಾಲುಗಳು ಬಟ್ಟೆಯಂತೆ ಅದುರುತ್ತವೆ. ಅವನು ಭಾರ ಬೇರೆ ಇದ್ದಾನೆ.' ಕೊಸರಾಡುತ್ತಿದ್ದ ಮಗುವನ್ನು ತನ್ನ ಗಂಡುಹುಡುಗನದಂತಹ ಸೊಂಟದ ಮೇಲೆ ಮತ್ತಷ್ಟು ಮೇಲೇರಿಸಿಕೊಳ್ಳುತ್ತ ರಾಣಿ ಅಲವತ್ತುಕೊಂಡಳು.